
KANNADA/KANARESE – *"The Two Roads"*

# ಎರಡು ಮಾರ್ಗಗಳು



## ಎರಡು ಮಾರ್ಗಗಳು

## ಮಾರ್ಗವನ್ನು ಆರಿಸಿಕೊಳ್ಳುವದು

ನಾವು ಹೋಗಲಾರದ ಸ್ಥಳಕ್ಕೆ ಪ್ರಯಾಣ ಮಾಡುವಾಗ ಯಾವ ...ರಿಯಲ್ಲಿ ಹೋಗುವದು ಉತ್ತಮವೋ ಅದನ್ನು ಕೇಳಿ ತಿಳಿದುಕೊಳ್ಳ...ಬೇಕು. ನಾವು ಪ್ರಯಾಣ ಮಾಡುವಾಗ ನಮ್ಮ ಕಣ್ಣುಗಳನ್ನು ತೆರೆದು ...ಪ್ರಯಾಣ ಮಾಡಬೇಕು. ಯಾಕೆಂದರೆ ನಾವು ಒಂದುವೇಳೆ ಸರಿಯಾದ ...ಮಾರ್ಗದಲ್ಲಿ ಇಲ್ಲ ಎಂಬುದಾಗಿ ಕಂಡುಬಂದರೆ ನಾವು ತಕ್ಷಣವೇ ಹಿಂದಕ್ಕೆ ...ರಿಗಿ ಸರಿಯಾದ ಮಾರ್ಗದಕಡೆಗೆ ಸುಡುಕಬೇಕು. ಹಾಗೆಯೇ ನೀವು ನಾನು ...ತಿದಿನ ಈ ಪ್ರಪಂಚದಿಂದ ನಿತ್ಯತ್ವದ ಮೇಲೆ ಪ್ರಯಾಣ ಮಾಡುತ್ತಾ ...ದ್ದೇವೆ. ನಾವು ಒಂದುಸಾರಿ ಅನಿತ್ಯತ್ವ ದೊಳಗೆ ಸೇರಿದರೆ ಅದು ಅಂತ್ಯ ...ಲ್ಲದ್ದೂ ಮತ್ತು ಬದಲಾಗದೆ ಇರುವಂಥದ್ದು. ಆದುದರಿಂದ ನೀವು ಎಲ್ಲಿಗೆ ...ಹೋಗುತ್ತಾ ಇದ್ದೀಯೋ ನಿನಗೆ ಗೊತ್ತುಂಟೋ ?



## ನಮಗೆ ಮಾರ್ಗವನ್ನು ತೋರಿಸುವ ಗ್ರಂಥ

ದೇವರು, ತನ್ನ ಪ್ರೀತಿ ಕರುಣೆಗಳ ಮೂಲಕ ಪರಿಶುದ್ಧ ಗ್ರಂಥವನ್ನು ಒಂದು ಮಾರ್ಗವನ್ನು ತೋರಿಸುವ ಪುಸ್ತಕವನ್ನು ನಮಗೆ ದಯಪಾಲಿಸಿದನು. ಅದು ಪರಲೋಕ ಮಾರ್ಗವನ್ನು ಕುರಿತು ನಮಗೆ ವಿಶಾಧವಾಗಿ ತೋರಿಸುವದು. ಈ ಕರಪತ್ರದಲ್ಲಿ ಇರುವ ವಚನಗಳೆಲ್ಲ ಇದರಿಂದಲೇ ಸಂಗ್ರಹಿಸಲ್ಪಟ್ಟಿವೆ. "ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವು ನನ್ನ ದಾರಿಗೆ ಬೆಳಕೂ ಆಗಿದೆ" ( ಕೀರ್ತನೆಗಳು 119 : 105 )

## ಅಗಲವಾದ ಮಾರ್ಗ

ಈ ಮಾರ್ಗದ ಮೇಲೆ ಅನೇಕರು ಪ್ರಯಾಣ ಮಾಡುತ್ತಾರೆ. ಇಕ್ಕಟ್ಟಾದ ಬಾಗಿಲಿನಿಂದ ಹೊಳಕ್ಕೆ ಹೋಗಿರಿ. "ನಾಶನಕ್ಕೆ ಹೋಗುವ ಬಾಗಿಲು ದೊಡ್ಡದು ದಾರಿ ಅಗಲವು ಅದರಲ್ಲಿ ಹೋಗುವವರು ಬಹು ಜನ". ( ಮತ್ತಾಯ 7 : 13 )

ಬಹಳಮಂದಿ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡಿದ್ದಾರೆ. ಅವರು ನಾಶನಕ್ಕೆ ಹೋಗುವ ಮಾರ್ಗದಲ್ಲಿ ಇದ್ದೇವೆ ಎಂಬುದನ್ನು ತಿಳಿದುಕೊಂಡಿಲ್ಲ. ಮತ್ತು ಅದಕ್ಕೆ ಲಕ್ಷ್ಯ ಕೊಡುವದಿಲ್ಲ "ಮನುಷ್ಯ ದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿ ಯುಂಟು. ಅದು ಕಟ್ಟಕಡೆಗೆ ಮರಣ ಮಾರ್ಗವೆ" ( ಜ್ಞಾನೋಕ್ತಿಗಳ 14 : 12 ). "ಈ ಪ್ರಪಂಚದ ದೇವರು (ಸೈತಾನನು) ನಂಬಿಕೆ ಇಲ್ಲದ ದೇವರ ಮನಸ್ಸನ್ನು ಮಂಕು ಮಾಡಿದನು" ( II ಕೊರಿಂಥ 4 : 4 )

## ಭಾರಗಳು

ಈ ವಿಶಾಲವಾದ ಮಾರ್ಗದ ಮೇಲೆ ನಡೆಯುವ ಜನರು ಪಾಪದ ಭಾರದಿಂದ ತುಂಬಿಕೊಂಡಿದ್ದಾರೆ. "ಹೆಚ್ಚು ಕಡಿಮೆ ಏನೂ ಇಲ್ಲ ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" ( ರೋಮ 3 : 23 ). "ದೇವರಿಗೆ ಗೊತ್ತಿಲ್ಲದೆ ಒಂದು ಪಾಪವನ್ನಾದರೂ ಬಚ್ಚಿಡಲು ಆಗುವದಿಲ್ಲ ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ." ( ಸಾಮುವೇಲ್ 16 : 7 )

ಅವರ ಪಾಪದ ಭಾರಗಳು ಅವರ ಬೆನ್ನುಗಳನ್ನು ಸರಪಣಿಗಳಿಂದ ಬಂಧಿಸಲ್ಪಟ್ಟಿವೆ. ಆದ್ದರಿಂದ ನಮ್ಮ ಸ್ವಂತ ಕೃತ್ಯಗಳಿಂದ ನೀವು ನಾನು ಅವುಗಳಲ್ಲಿ ಒಂದರಿಂದಲೂ ಸಹಿತ ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ ಕಾಲವು ಸಮೀಪವಾಗಿದೆ, ಆ ಭಾರವು ಇನ್ನೂ ಹೆಚ್ಚಾಗುತ್ತದೆ. ಆಗ "ಪಾಪದ ಸಂಬಳ ಮರಣವಾಗಿ ಪರಿಣಮಿಸುತ್ತದೆ". (ರೋಮ 6 : 23)

## ಮಿಂಚು

ಚಿತ್ರದಲ್ಲಿರುವ ಮಿಂಚು ದೇವರ ನ್ಯಾಯ ತೀರ್ಪಿನ ಕುರಿತು ತೋರಿಸುವದು "ಒಂದೇಸಾರಿ ಸಾಯುವದೂ ಆಮೇಲೆ ನ್ಯಾಯ ತೀರ್ಪೂ ಮನುಷ್ಯರಿಗೆ ಹೇಗೆ ನೇಮಕವಾಗಿದೆಯೋ ಹಾಗೆಯೇ ಕ್ರಿಸ್ತನು ಸಹ ಬಹು ಜನರ ಪಾಪಗಳನ್ನು ಹೊತ್ತುಕೊಳ್ಳುವದಕ್ಕೋಸ್ಕರ ಒಂದೇಸಾರಿ ಸಮರ್ಪಿತನಾದನು" (ಇಬ್ರಿಯ 9 : 27) "ಆಮೇಲೆ ಬೆಳ್ಳಗಿರುವ ಮಹಾ ಸಿಂಹಾಸನವನ್ನು ಅದರ ಮೇಲೆ ಕೂತಿದ್ದಾತನನ್ನೂ ಕಂಡೆನು. ಆತನೆದುರಿನಿಂದ ಭೂಮ್ಯಾಕಾಶಗಳು ಓಡಿ ಹೋಗಿ ಇನ್ನು ಕಾಣಿಸದ ಹಾಗಾದವು. ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವದನ್ನು ಕಂಡೆನು. ಆಗ ಪುಸ್ತಕಗಳು ತೆರೆಯಲ್ಪಟ್ಟವು, ಮತ್ತು ಜೀವಭಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು. ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯ ತೀರ್ಪಾಯಿತು. ಯಾವನ ಹೆಸರು ಜೀವಭಾಧ್ಯರ ಪಟ್ಟಿಯಲ್ಲಿ ಬರೆದಿದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು".
(ಪ್ರಕಟನೆ 20 : 11, 12 : 15)

## ಬೆಂಕಿ

ದೇವರು ಪರಿಶುದ್ಧನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳಿಗೆ ತಕ್ಕ ಶಿಕ್ಷೆ ತಪ್ಪದೆ ಉಂಟು. ದೇವರಿಗೆ ವಿಧೇಯರಾಗಲಾರದವರಿಗೆ ನಿತ್ಯ ನರಕವು ಅಂದರೆ, ಶಾಶ್ವತ ಮರಣ ದಂಡನೆಯೆ ಯೋಗ್ಯ ಸ್ಥಳವು ಉಂಟು ಎಂಬುದನ್ನು ದೇವರ ವಾಕ್ಯ ಬೋಧಿಸುತ್ತಾ ಇದೆ. "ದುಷ್ಟರು ಅಂದರೆ ದೇವರನ್ನು ಅಲಕ್ಷ್ಯ ಮಾಡುವ ಜನಾಂಗಗಳವರೆಲ್ಲಾ ಪಾತಾಳಕ್ಕೆ ಇಳಿದು ಹೋಗುವರು" (ಕೀರ್ತನೆ 9 : 17). ನೀವೂ ಸಹ ಆ ಸ್ಥಳಕ್ಕೆ ಹೋಗುವದು ಒಳ್ಳೆಯದಲ್ಲ ಯಾಕೆಂದರೆ ದೇವರನ್ನು ಅಲಕ್ಷ್ಯ ಮಾಡುವ ಜನರಿಗೆ ಸಹ ಇದು ನೇಮಕವಾಗಿದೆ.

ಆದರೆ ದೇವರು ಪ್ರೀತಿ ಸ್ವರೂಪಿಯಾಗಿದ್ದಾನೆ. ಆದ್ದರಿಂದಲೇ "ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರಿಗಿಸಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದಾನೆ". (II ಪ್ರೇತ್ರ 3 : 9) ಆತನ ಪ್ರೀತಿ ಕರುಣೆಗಳ ಮೂಲಕ ಇಷ್ಟಪಡುವವರಿಗೆ ಆನಂದದಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನೂ ಕೂಡಾ ಸಿದ್ಧಪಡಿಸಿದ್ದಾನೆ. ನೀವು ಆ ಜೀವ ಮಾರ್ಗವನ್ನು ತಿಳಿದುಕೊಳ್ಳುವದಕ್ಕೆ ಇಷ್ಟಪಡುತ್ತೀಯೋ?

## ಜೀವ ಮಾರ್ಗವು ರಕ್ಷಕನು

ನಮ್ಮ ಪಾಪಗಳಿಂದ ಹಾಗೂ ನಮ್ಮ ಪಾಪಗಳಿಗೆ ತಕ್ಕ ಶಿಕ್ಷೆಯಿಂದ ಬಿಡುಗಡೆ ಹೊಂದಲಾರೆನು ಎಂಬುದಾಗಿ ದೇವರು ತಿಳಿದು ಆತನು ನಮಗೆ ಒಬ್ಬ ರಕ್ಷಕನನ್ನು ಏರ್ಪಾಡು ಮಾಡಿದನು. "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವ ಪಡೆಯಬೇಕೆಂದು ಆತನನ್ನು ಕೊಟ್ಟನು". (ಯೋಹಾನ 3 : 16) ಪರಲೋಕದ ತಂದೆಯಾದ ದೇವರು ಯೇಸುಕ್ರಿಸ್ತು ಎಂಬವನನ್ನು ತನ್ನ ಒಬ್ಬನೇ ಮಗನನ್ನು ಪರಲೋಕದಿಂದ ಭೂಲೋಕದೊಳಗೆ ಕಳುಹಿಸಿದನು. ತಾನು ಒಬ್ಬ ಮಾನವನ ಹಾಗೆ ಈ ಲೋಕದಲ್ಲಿ ಜೀವಿಸಿದನು. ತಾನೇ ಪಾಪವನ್ನು ಎಂದಿಗೂ ಮಾಡಲಿಲ್ಲ. ಆತನು ಎಲ್ಲರಿಗೂ ಒಳ್ಳೇದನ್ನೇ ಮಾಡಿದನು. ರೋಗಗಳನ್ನು ಗುಣಪಡಿಸಿದನು. ಕುಷ್ಟರೋಗಗಳನ್ನು ಸ್ವಸ್ಥಪಡಿಸಿದನು ದೆವ್ವಗಳನ್ನು ಬಿಡಿಸಿದನು. ಪಶ್ಚಾತ್ತಾಪ ಪಟ್ಟಂತೆ ಪಾಪಿಗಳನ್ನು ಕ್ಷಮಿಸುತ್ತಾ ದೇವರ ಕುರಿತಾಗಿ ಅನೇಕ ಜನರಿಗೆ ಬೋಧಿಸುತ್ತಾ ಇದ್ದನು.

ಮಾನವನಾಗಿ ತಾನು ನರವತಾರ ಎತ್ತುವದರಲ್ಲಿ ದೊಡ್ಡ ಉದ್ದೇಶವೇನಂದರೆ, ನಮ್ಮೆಲ್ಲರಿಗೋಸ್ಕರ ಯಜ್ಞದ ಪಶುವಾಗಿ ಮರಣ ಹೊಂದುವದಕ್ಕೂ ನಮ್ಮ ಅಪರಾಧಗಳ ನಿಮಿತ್ತ ಕ್ರಯ ವಿಮೋಚನೆಯನ್ನು ಕೊಟ್ಟು ತನ್ನ ಶ್ರೇಷ್ಠ ರಕ್ತವನ್ನು ಸುರಿಸಿ, ತನ್ನ ನಿಷ್ಕಳಂಕ ಜೀವಿತವನ್ನು ಅಪೇಕ್ಷಿಸುವದಕ್ಕಾಗಿಯೇ ಇದೆ ಮತ್ತು ಆತನು ದುಷ್ಟರ ಕೈಯಲ್ಲಿ ಸಿಕ್ಕಿಕೊಂಡು ತನ್ನ ಬೆನ್ನು ಎಲ್ಲಾ ರಕ್ತದ ಪ್ರಾಯಗಳಿಂದ ತುಂಬಿಸುವಷ್ಟರ ಮಟ್ಟಿಗೆ ತಲೆಯ ಮೇಲೆ ಮುಳ್ಳಿನ ಕಿರೀಟದಿಂದ ಅಲಂಕರಿಸಿ, ಕಡೆಗೆ ಕಲ್ವಾರಿ ಗುಡ್ಡದ ಮೇಲೆ ಮೊಳೆಗಳಿಂದ ಕಾಲು ಕೈಗಳನ್ನು ಬಂದಿಸಿ ಶಿಲುಬೆಗೆ ಹಾಕಲ್ಪಡುವದಕ್ಕೆ ಬಂದನು. "ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು" (1 ಪೇತ್ರ 2:24) ಆತನು ನಿನ್ನ ಸಲುವಾಗಿ ನನ್ನ ಸಲುವಾಗಿ ಮರಣ ಹೊಂದಿದ್ದಾನೆ.

## ಆತನ ಪುನರುತ್ಥಾನ

ಮೂರು ದಿವಸಗಳಾದಮೇಲೆ ಯೇಸುಕ್ರಿಸ್ತನು ಪುನರುತ್ಥಾನವಾಗಿ ಮರಣದಿಂದ ತಿರಿಗಿ ಎದ್ದನು. ಆತನು ತನ್ನ ಶಿಷ್ಯರಿಗೆ ಮಾತನಾಡಿ ಅವರೊಂದಿಗೆ ನಡೆದಾಡಿದ ಮೇಲೆ ಸುಮಾರು 40 ದಿನಗಳಾದ ಮೇಲೆ ಆತನು ದಿವ್ಯಾರೋಹಣನಾಗಿ ಪರಲೋಕಕ್ಕೆ ಹೋದನು. ಅಲ್ಲಿ ಆತನು ತನ್ನ ತಂದೆಯ ಬಲಪಾರ್ಶ್ವದಲ್ಲಿ ಕೂತುಕೊಂಡಿದ್ದಾನೆ. ಆತನು ಶಾಶ್ವತವಾದ ರಕ್ಷಕನು "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವೂ ನನಗೆ ಕೊಡಲ್ಪಟ್ಟಿದೆ." (ಮತ್ತಾಯ 28:18) "ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವುದಕ್ಕೆ ಶಕ್ತನಾಗಿದ್ದಾನೆ ಅವರಿಗೋಸ್ಕರ ವಿಜ್ಞಾಪನೆ ಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ." (ಇಬ್ರಿಯ 7:25)

## ಪರಲೋಕ

<u>ಪರಲೋಕ ಎಂದರೆ, ದೇವರು ತನ್ನ ಮಹಿಮೆಯಿಂದ ಕೂಡಿದ ಸ್ಥಳವಾಗಿದೆ.</u> ಪ್ರಭುವಾದ ಯೇಸು ಹೇಳಿದ್ದೇನಂದರೇ "ನಿಮಗೆ ಸ್ಥಳವನು ಸಿದ್ಧಮಾಡುವದಕ್ಕೆ ಹೋಗುತ್ತೇನಲ್ಲಾ ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು" (ಯೋಹಾನ 14:2,3)

<u>ಇದು ಮಹಾ ಆಶ್ಚರ್ಯಕರವಾದ ಸ್ಥಳವಾಗಿದೆ.</u> ಅಲ್ಲಿ "ಅವರ ಕಣ್ಣೀರನ್ನೆಲ್ಲಾ ಒರಸಿ ಬಿಡುವನು. ಇನ್ನು ಮರಣವಿರುವದಿಲ್ಲ. ಇನ್ನು ದುಃಖವಾಗಲೀ ಗೋಳಾಟವಾಗಲೀ ಕಷ್ಟವಾಗಲೀ ಇರುವದಿಲ್ಲ ಮೊದಲಿದ್ದದ್ದೆಲ್ಲಾ ಇಲ್ಲದೇ ಹೋಯಿತು. ಇನ್ನು ರಾತ್ರಿ ಇರುವದಿಲ್ಲ ದೇವರಾದ ಕರ್ತನೇ ಅವರಿಗೆ ಬೆಳಕನ್ನು ಕೊಡುವನು" (ಪ್ರಕಟನೆ 21:4, 22:5)

<u>ಇದು ಪರಿಶುದ್ಧ ಸ್ಥಳವಾಗಿದೆ</u> "ಅದರಲ್ಲಿ ಹೊಲೆಯಾದದ್ದೆಂದೂ ಸೇರುವದಿಲ್ಲ. ಅಸಹ್ಯವಾದದ್ದನ್ನೂ ಸುಳ್ಳಾದದ್ದನ್ನೂ ನಡಿಸುವವನು ಸೇರುವದಿಲ್ಲ. ಯಜ್ಞದ ಕುರಿಯಾದಾತನ ಜೀವಭಾಧ್ಯರ ಪಟ್ಟಿಯಲ್ಲಿ ಯಾರಾರ ಹೆಸರುಗಳು ಬರೆದವೆಯೋ ಅವರು ಮಾತ್ರ ಸೇರುವರು" (ಪ್ರಕಟನೆ 21:27)



<u>ಆದರೆ ಪರಲೋಕಕ್ಕೆ ಒಂದೇ ಒಂದು ಮಾರ್ಗ ಉಂಟು ಅದನ್ನು ಯೇಸುಸ್ವಾಮಿ ಹೇಳಿದ್ದಾನೆ</u> "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ. ನನ್ನ ಮೂಲಕವಾಗಿ ಹೊರತು ಯಾರು ತಂದೆಯ ಬಳಿಗೆ ಬರುವುದಿಲ್ಲ" (ಯೋಹಾನ 14:6) "ಬರಬೇಕಾದ ರಕ್ಷಣೆಯು ಇನ್ನು ಎಲ್ಲಿಯೂ ಸಿಕ್ಕುವದಿಲ್ಲ ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ ಎಂದು ಹೇಳಿದನು" (ಅ. ಕೃ. 4:12)

## ಪರಲೋಕಕ್ಕೆ ಹೋಗುವ ಮಾರ್ಗದೊಳಗೆ ನಾವು ಹೇಗೆ ಪ್ರವೇಶಿಸುತ್ತೇವೆ?

1. **"ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ"** (ಮಾರ್ಕ 1:15) ದೇವರ ಕಡೆಗೆ ತಿರುಗಿ ಕೊಳ್ಳುವದು ಅಂದರೆ ನಮ್ಮ ಹೃದಯ ಪೂರ್ವಕವಾಗಿ ಪಾಪವನ್ನು ಬಿಟ್ಟು ದೇವರ ಕಡೆಗೆ ತಿರುಗುವದು.

2. **ಪ್ರಭುವಾದ ಯೇಸುಕ್ರಿಸ್ತನ ಕಡೆಗೆ ಬನ್ನಿರಿ :-** ಪ್ರಾರ್ಥನೆಯ ಮೂಲಕವಾಗಿ ನೀವು ಇರುವಂಥ ಸ್ಥಳದಲ್ಲಿಯೇ ಪಾಪದ ಭಾರದಿಂದ ಆತನನ್ನು ಸಮೀಪಿಸಿ ನನ್ನ ಪಾಪಗಳನ್ನು ಕ್ಷಮಿಸು ಎಂಬುದಾಗಿ ಆತನನ್ನು ಬೇಡಿಕೊಳ್ಳ ಬೇಕು. ಯಾಕಂದರೆ ಆತನು "ನನ್ನ ಬಳಿಗೆ ಬರುವವನನ್ನು ನಾನು ಎಂದಿಗೂ ತಳ್ಳಿಬಿಡುವದೇ ಇಲ್ಲ" ಎಂದು ಹೇಳಿದ್ದಾನೆ. (ಯೋಹಾನ 6 : 37) "ಎಲ್ಲೈ ಕಷ್ಟ ಪಡುವವರೇ ಹೊರೆ ಹೊತ್ತವರೇ ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿ ಕೊಡುವೆನು" (ಮತ್ತಾಯ 11 : 28)

3. **ನಿನ್ನ ರಕ್ಷಣೆಗೋಸ್ಕರ ಕ್ರಿಸ್ತನಲ್ಲಿ ನಂಬಿಕೆ ಇಡಬೇಕು.** "ಆತನ ಮಗನಾದ ಏಸುವಿನ ರಕ್ತವು ಸಕಲ ಪಾಪವನ್ನು ನಿವಾರಣ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ" (1 ಯೋಹಾನ 1 : 7)

4. **ಆತನು ನಿನಗೆ ಒಂದು ಹೊಸ ಜೀವನವನ್ನು ಕೊಡುವನು ಅದು ಶಾಶ್ವತವಾದ ಜೀವವು** "ನನ್ನ ವಾಕ್ಯವನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವವನ್ನು **ನಿನ್ನ ಜೀವವನ್ನು ಹೊಂದಿದ್ದಾನೆ** ಅವನು ತೀರ್ಪಿಗೆ ಗುರಿಯಾಗುವದಿಲ್ಲ." **ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ"** (ಯೋಹಾನ 5 : 24) "ಯಾವನಾದರೂ ಕ್ರಿಸ್ತನಲ್ಲಿ ಇದ್ದರೆ ಅವನು ನೂತನ ಸೃಷ್ಟಿಯೊದನು ಇಗೋ ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು" (ಕೊರಿಂಥ 5 : 17)

5. **ನೀನು ಶಾಂತಿಯನ್ನೂ ನಿಶ್ಚಯತ್ವವನ್ನೂ ಹೊಂದಿಕೊಳ್ಳುವಿ.**
"ಹೀಗಿರುವಾಗ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ **ಕರ್ತನಾದ ಯೇಸುಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ** " (ರೋಮ 5:1)

"ಆ ಸಾಕ್ಷಿ ಯಾವದೆಂದರೆ ದೇವರು ತಮಗೆ ನಿತ್ಯಜೀವವನ್ನು ಅನುಗ್ರಹಿಸಿದನು ಆ ಜೀವವು ಆತನ ಮಗನಲ್ಲಿ ಅದೇ ಎಂಬುದೇ ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೆ **ಅವನಿಗೆ ಆ ಜೀವ ಉಂಟು** ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ **ದೇವರ** ಮಗನ ಹೆಸರಿನಲ್ಲಿ ನಂಬಿಕೆ ಇಟ್ಟಿರುವವರಾದ ನಿಮ್ಮಲ್ಲಿ **ನಿತ್ಯ ಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ** ಈ ಮಾತುಗಳನ್ನು ಬರೆದಿದ್ದಾನೆ" (1 ಯೋಹಾನ 5 : 11, 12 : 13)

## ಹೊಸ ಜೀವಿತವನ್ನು ಜೀವಿಸುವದು ಹೇಗೆ

1. **ಪ್ರತಿದಿನ ಪರಿಶುದ್ಧ ಗ್ರಂಥವನ್ನು ಓದಬೇಕು:—** ಇದು ನಮ್ಮ ಮಾರ್ಗಕ್ಕೆ ದೀಪವೂ ಜೀವಕ್ಕೆ ಆಹಾರವೂ ಆಗಿದೆ "ಹಸುಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ ಅದರಿಂದ ಬೆಳೆಯುತ್ತಾ ರಕ್ಷಣೆಯನ್ನು ಹೊಂದುವಿರಿ" (1 ಪೇತ್ರ 2:2) ನೀನು ಓದಿದ್ದನ್ನು ಪರಿಶುದ್ಧಾತ್ಮನ ಮೂಲಕವಾಗಿ ನಡೆಸಿ, ಕಲಿಯುವದಕ್ಕೋಸ್ಕರ ದೇವರನ್ನು ಬೇಡಿಕೋ.

2. **ಪ್ರತಿದಿನ ಪ್ರಾರ್ಥಿಸುವದರ ಮೂಲಕ ದೇವರನ್ನು ಸಮೀಪಿಸು:**
"ಯೇಸು ಎಂಬ ಹೆಸರಿನಲ್ಲಿ ಪ್ರಾರ್ಥಿಸು, ಯಾವ ಸಂಬಂಧವಾಗಿಯೂ ಚಿಂತೆ ಮಾಡಬೇಡಿರಿ ಸರ್ವ ವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ ಪ್ರಾರ್ಥನೆ, ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯ ಪಡಿಸಿರಿ. ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವ ಶಾಂತಿಯು ನಿಮ್ಮ ಹೃದಯವನ್ನು ಕ್ರಿಸ್ತ ಯೇಸುವಿನಲ್ಲಿ ಕಾಯುವದು " (ಫಿಲಿಪ್ಪ 4:6, 7)

3 **ಕ್ರಿಸ್ತನ ಕುರಿತಾಗಿ ಇತರರಿಗೆ ಹೇಳಬೇಕು:—**
"ನೀನು ನಿನ್ನ ಮನೆಗೂ ನಿನ್ನ ಜನರ ಬಳಿಗೂ ಹೋಗಿ ಸ್ವಾಮಿಯು ನಿನ್ನಲ್ಲಿ ಕರುಣೆಯಿಟ್ಟು ನಿನಗೆ ಎಂಥೆಂಥ ಉಪಕಾರಗಳನ್ನು ಮಾಡಿದ್ದಾನೆ ಅದನ್ನು ಹೇಳು ಅಂದನು". (ಮಾರ್ಕ 5 : 19)

4. **ಶೋಧನೆಯಲ್ಲಿ ಯೇಸುಕ್ರಿಸ್ತನ ಹೆಸರಿನಲ್ಲಿ ಪ್ರಾರ್ಥಿಸು :**
"ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವದರಿಂದ ಶೋಧಿಸಲ್ಪಡುವವರಿಗೆ ಸಹಾಯ ಮಾಡುವದಕ್ಕೆ ಶಕ್ತನಾಗಿದ್ದಾನೆ" (ಇಬ್ರಿಯ 2 : 18)



5. **ನೀನು ಒಂದುವೇಳೆ ಯಾವದಾದರೂ ಪಾಪದಲ್ಲಿ ಸಿಕ್ಕಿಕೊಂಡಿದ್ದರೆ ತಕ್ಷಣವೇ ಅದನ್ನು ದೇವರಮುಂದೆ ಒಪ್ಪಿಕೊಳ್ಳಬೇಕು:**
"ನಮ್ಮ ಪಾಪಗಳನ್ನು ಒಪ್ಪಿಕೊಂಡು **ಅರಿಕೆ ಮಾಡಿದರೆ** ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿ ಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು". (1 ಯೋಹಾನ 1 : 9)

6. **ಪ್ರಭುವಾದ ಯೇಸುಕ್ರಿಸ್ತನ ಹೆಸರಿನಲ್ಲಿರುವ ಇತರ ಸಹೋದರನ ನಂಬಿಕೆಯಲ್ಲಿ ಕೂಡಿ ಇರುವದಕ್ಕೆ ಪ್ರಯತ್ನಿಸಬೇಕು :**
"ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬುದೇ ನಾನು ಕೊಡುವ ಆಜ್ಞೆಯಾಗಿದೆ". (ಯೋಹಾನ 15 : 12)

7. **ದೇವರಿಗೆ ಎಲ್ಲಾಸಮಯದಲ್ಲಿ ವಿಧೇಯನಾಗಿರು :**
"ಯಾರಾದರೂ ನನ್ನನ್ನು ಪ್ರೀತಿಸುವವನಾದರೆ, ನನ್ನ ಮಾತನ್ನು ಕೈಕೊಂಡು ನಡೆಯುವನು". (ಯೋಹಾನ 14 : 23)

8. **ಭಯಪಡಬಾರದು ಕ್ರಿಸ್ತನು ನಿನ್ನಸಂಗಡ ಇದ್ದಾನೆ :**
"ನಾನು ನಿನ್ನನ್ನು ಎಂದಿಗೂ ಕೈ ಬಿಡುವದಿಲ್ಲ. ಎಂದಿಗೂ ತೊರೆಯುವದಿಲ್ಲವೆಂದು ದೇವರು ತಾನೇ ಹೇಳಿದ್ದಾನೆ" (ಇಬ್ರಿಯ 13:5)

9. **ನಿನ್ನನ್ನು ನೀನೆ ಸಂಪೂರ್ಣವಾಗಿ ಪ್ರಭುವಾದ ಯೇಸುಕ್ರಿಸ್ತನಿಗೆ ವಿಧೇಯನಾಗಿ ಅರ್ಪಿಸಬೇಕು :**

ಆತನು ತನ್ನ ಚಿತ್ತದ ಪ್ರಕಾರ ನಿನ್ನನ್ನು ನನ್ನ ಜೀವಿತವನ್ನೂ ನಡಿಸುವ ಹಾಗೆ ಅನುಮತಿಯನ್ನು ಕೊಡಬೇಕು. ಈ ಮೇಲಿನ ಪ್ರಕಾರವಾಗಿ ನೀನು ಆತನ ಮಾರ್ಗದಲ್ಲಿ ನಿಜವಾದ ಆನಂದವನ್ನು ಕೊಂಡುಕೊಳ್ಳುವಿ.

ಪ್ರಭುವಾದ ಯೇಸು ಕ್ರಿಸ್ತನು **ಮಾತ್ರವೆ ರಕ್ಷಕನಾಗಿದ್ದಾನೆ.** ಮತ್ತು ಆತನೇ **ಸಂಪೂರ್ಣ ರಕ್ಷಕನು** ಆತನು ನಿನಗೆ ಅಗತ್ಯವಾದ **ಸಮಸ್ತವೂ** ಆತನೇ ಆಗಿದ್ದಾನೆ

---

If you have found salvation in Christ, or have been otherwise blessed through our Gospel literature, please let us know. We would like to thank God with you, and remember you further in our prayers. **Our Heart of Man Book can now be downloaded in 480 different languages onto cell phones, tablets, etc from our website www.angp-hb.co.za.**
For **free** Gospel literature, books and tracts in over 540 languages, write to:

**E-MAIL: info@angp.co.za**
**ALL NATIONS GOSPEL PUBLISHERS**
**P.O. Box 2191, PRETORIA, 0001, R.S.A.**
(A Gospel Literature Mission financed by donations)
(Reg. No. 1961/001798/08)